ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300
ಫ್ಯಾಕ್ಸ್: 080–23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: K1/KSQAAC/5 ಮತ್ತು 8ನೇ ವಾ.ಪ/05/2022–23 ದಿನಾಂಕ: 09.03.2023

## ಜ್ಞಾಪನ

ವಿಷಯ:– 2022–23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದ ಎಲ್ಲಾ ಶಾಲೆಗಳಲ್ಲಿನ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ AML Sheet ಮಾದರಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಬಗ್ಗೆ.

ಉಲ್ಲೇಖ :– 1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ: E-870867-DPII-PIOC7-2(PLM)/3/2022, ದಿನಾಂಕ: 12.12.2022
2. ಈ ಕಛೇರಿ ಮಾರ್ಗಸೂಚಿ ಸಮಸಂಖ್ಯೆ ದಿನಾಂಕ: 27.02.2023

~*~*~*~

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2022–23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 15.03.2023 ರಿಂದ 18.03.2023 ರವರೆಗೆ** ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 13.03.2023 ರಿಂದ 18.03.2023 ರವರೆಗೆ** ಮೌಲ್ಯಾಂಕನವನ್ನು (SA-2) ಕೆ.ಎಸ್.ಇ.ಎ.ಬಿ.ಯ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ನಡೆಸಲಾಗುತ್ತಿದೆ.

ಸದರಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ 5 ಮತ್ತು 8ನೇ ತರಗತಿಗೆ ಪ್ರತ್ಯೇಕವಾಗಿ AML Sheet ಮಾದರಿಯನ್ನು **ದಿನಾಂಕ: 09.03.2023 ರಂದು** ಮಂಡಲಿಯ ವೆಬ್‌ಸೈಟ್ (https://kseab.karnataka.gov.in/) ನಲ್ಲಿ ಪ್ರಕಟಿಸಲಾಗಿರುತ್ತದೆ.

- ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಅಗತ್ಯ ಸಂಖ್ಯೆಯಲ್ಲಿ ದಿನಾಂಕ/ಮಾಧ್ಯಮ/ಭಾಷೆ/ವಿಷಯವಾರು AML Sheet ಅನ್ನು ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳುವುದು.
- ಒಂದು AML Sheet ನಲ್ಲಿ 24 ವಿದ್ಯಾರ್ಥಿಗಳ SATS ID ಯನ್ನು ನಮೂದಿಸಲು ಅವಕಾಶವಿದ್ದು, 24ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ಅಗತ್ಯಕ್ಕೆ ಅನುಗುಣವಾಗಿ AML Sheet ಅನ್ನು ಮುದ್ರಿಸಿಕೊಳ್ಳುವುದು. ಅದೇ ಕ್ರಮಾಂಕದಲ್ಲಿ ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ ಮಾಡುವುದು.
- AML Sheet ನಲ್ಲಿ ಜಿಲ್ಲೆಯ ಹೆಸರು, ಬ್ಲಾಕ್ ಹೆಸರು, ಶಾಲೆಯ ಡೈಸ್ ಸಂಕೇತ ಮತ್ತು ಹೆಸರು, ಮೌಲ್ಯಾಂಕನ ದಿನಾಂಕ, ಭಾಷೆ/ವಿಷಯ/ಮಾಧ್ಯಮವಾರು ವಿದ್ಯಾರ್ಥಿಗಳ SATS ID ಗಳನ್ನು ಭರ್ತಿ ಮಾಡಿ ಸಿದ್ಧಪಡಿಸಿಕೊಳ್ಳುವುದು.
- ಒಂದಕ್ಕಿಂತ ಹೆಚ್ಚು ಪ್ರಥಮ/ದ್ವಿತೀಯ/ತೃತೀಯ ಭಾಷೆಗಳಿದ್ದಲ್ಲಿ AML Sheet ನ Language ಕಾಲಂ ನಲ್ಲಿ ಟಿಕ್ ಮಾಡಿ Subject ಕಾಲಂ ನಲ್ಲಿ ವಿಷಯವನ್ನು ನಮೂದಿಸುವುದು.

**ಉದಾ:– ಒಂದು ಶಾಲೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡು ಪ್ರಥಮ ಭಾಷೆ ಇದ್ದಲ್ಲಿ,**

| ಪ್ರಥಮ ಭಾಷೆ ಕನ್ನಡಕ್ಕೆ ಪ್ರತ್ಯೇಕ AML Sheet ಬಳಸುವುದು | ಪ್ರಥಮ ಭಾಷೆ ಇಂಗ್ಲಿಷ್‌ಗೆ ಪ್ರತ್ಯೇಕ AML Sheet ಬಳಸುವುದು. |
|---|---|
| Language ಕಾಲಂನ FL ಮುಂದೆ ✓ ಗುರುತು ಹಾಕಿ Subject : Kannada ಎಂದು ನಮೂದಿಸುವುದು | Language ಕಾಲಂನ FL ಮುಂದೆ ✓ ಗುರುತು ಹಾಕಿ Subject : English ಎಂದು ನಮೂದಿಸುವುದು |

ಈ ಮಾದರಿಯಲ್ಲಿಯೇ ದ್ವಿತೀಯ ಮತ್ತು ತೃತೀಯ ಭಾಷೆಗಳನ್ನು ನಮೂದಿಸುವುದು. ಕೋರ್ ವಿಷಯಗಳಿಗೆ Language ಕಾಲಂ ನಲ್ಲಿ ಟಿಕ್ ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ಮಾಧ್ಯಮವಾರು ಪ್ರತ್ಯೇಕ AML Sheet ಬಳಸಿ, Subject ಮತ್ತು Medium ಕಾಲಂ ಅನ್ನು ಕಡ್ಡಾಯವಾಗಿ ನಮೂದಿಸುವುದು.

- ಮೌಲ್ಯಾಂಕನ ನಡೆಯುವ ದಿನ ಯಾವುದೇ ವಿದ್ಯಾರ್ಥಿಯು ಗೈರುಹಾಜರಾಗಿದ್ದಲ್ಲಿ AML Sheet ನ Marks ಕಾಲಂ ನಲ್ಲಿ ABSENT ಎಂದು ಕೆಂಪು ಶಾಯಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು.
- ಪ್ರತಿ AML Sheet ನ ಕೊನೆಯಲ್ಲಿ ಹಾಜರಾದ, ಗೈರುಹಾಜರಾದ ಮತ್ತು ಒಟ್ಟು ವಿದ್ಯಾರ್ಥಿಗಳ ಸಂಖ್ಯಾ ಮಾಹಿತಿಯನ್ನು ನಮೂದಿಸುವುದು.
- ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಮೌಲ್ಯಮಾಪಕರು ಶಾಲೆಗಳಿಂದ ಭರ್ತಿ ಮಾಡಲಾದ AML Sheet ನಲ್ಲಿಯೇ ನಮೂದಿಸಬೇಕಾಗಿರುವುದರಿಂದ AML Sheet ನಲ್ಲಿ ನಮೂದಿಸಿರುವ SATS ID ಗಳ ಕ್ರಮಾಂಕದಲ್ಲಿಯೇ (ಗೈರುಹಾಜರಾದ ವಿದ್ಯಾರ್ಥಿಯ ಪ್ರಶ್ನೋತ್ತರ ಪತ್ರಿಕೆಯನ್ನು ಒಳಗೊಂಡಂತೆ) ಉತ್ತರಿಸಿದ ಪ್ರಶ್ನೋತ್ತರ ಪತ್ರಿಕೆಗಳನ್ನು ಜೋಡಿಸುವುದು.
- ಎಲ್ಲಾ ಕೊಠಡಿಗಳಿಂದ AML Sheet ಮತ್ತು ಉತ್ತರಿಸಿದ ಪ್ರಶ್ನೋತ್ತರ ಪತ್ರಿಕೆಗಳನ್ನು ಕ್ರೋಢೀಕರಿಸಿ ಪ್ರಶ್ನೋತ್ತರ ಪತ್ರಿಕೆಗಳು ಸರಬರಾಜಾದ ಕವರ್‌ಗಳಲ್ಲಿಯೇ ಇಟ್ಟು ಭಾಷಾವಾರು/ವಿಷಯವಾರು/ಮಾಧ್ಯಮವಾರು ಪ್ರತ್ಯೇಕ ಬಂಡಲ್ ತಯಾರಿಸಿ ನಿಯೋಜಿತ ಅಧಿಕಾರಿಗಳಿಗೆ ಹಸ್ತಾಂತರಿಸುವುದು.

9/3/2019

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:-**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರಿಗೆ.
2. ರಾಜ್ಯದ ಎಲ್ಲಾ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ.
4. ಶಾಲಾ ಮುಖ್ಯ ಶಿಕ್ಷಕರು / ಪ್ರಾಂಶುಪಾಲರು (ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ).

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ,**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ,
2. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು ರವರಿಗೆ,
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ,
4. ಕಛೇರಿ ಪ್ರತಿ.